# All India Radio: Bangalore
# National Bulletin In Kannada
# 29.09.2025 19.35 hrs.

## ಆಕಾಶವಾಣಿ, ಬೆಂಗಳೂರು
## ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು :

೧. ೪ ಸಾವಿರದ ೩೩ ಕೋಟಿ ರೂಪಾಯಿ ವೆಚ್ಚದ ಗಡಿಯಾಚೆಗಿನ ರೈಲು ಸಂಪರ್ಕ ಸ್ಥಾಪಿಸಲು ಭಾರತ-ಭೂತಾನ್ ಒಮ್ಮತ

೨. ಭದ್ರತಾ ಸವಾಲು ಎದುರಿಸಲು ಎಐ, ಡ್ರೋನ್ ಮತ್ತು ಸ್ವಯಂಚಾಲಿತ ಪ್ರತಿಕ್ರಿಯಾ ವ್ಯವಸ್ಥೆಗಳ ಸಂಯೋಜಿತ ಅಳವಡಿಕೆ ಅಗತ್ಯ - ರಕ್ಷಣಾ ಸಚಿವ ರಾಜ್‌ನಾಥ್ ಸಿಂಗ್

೩. ತಮಿಳುನಾಡು ಕಾಲ್ತುಳಿತ ಪ್ರಕರಣ; ಪರಿಶೀಲನೆಗೆ ಎನ್‌ಡಿಎ ನಿಯೋಗ ರಚನೆ

೪. ಐರೋಪ್ಯ ಮುಕ್ತ ವ್ಯಾಪಾರ ಒಕ್ಕೂಟದೊಂದಿಗಿನ ಒಪ್ಪಂದ ಅಕ್ಟೋಬರ್ ೧ ರಿಂದ ಜಾರಿ; ಕೇಂದ್ರ ಸಚಿವ ಪಿಯೂಷ್ ಗೋಯಲ್

೫. ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್; ಭಾರತಕ್ಕಿಂದು ಎರಡು ಚಿನ್ನ ಸೇರಿ ಒಟ್ಟು ೫ ಪದಕ

***************

ಕೊಕ್ರಾಜಾರ್-ಗೆಲೆಫು ಹಾಗೂ ಬಾನರ್‌ಹಾಟ್-ಸಾಂತ್ಸೆ ನಡುವೆ ಎರಡು ಗಡಿಯಾಚೆಗಿನ ರೈಲು ಸಂಪರ್ಕಗಳನ್ನು ಸ್ಥಾಪಿಸಲು ಭಾರತ ಮತ್ತು ಭೂತಾನ್ ಒಮ್ಮತ ಸೂಚಿಸಿದೆ. ಭೂತಾನ್‌ನೊಂದಿಗಿನ ರೈಲು ಯೋಜನೆಗಳ ಕುರಿತು ಮಾಹಿತಿ ನೀಡಿದ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಈ ಯೋಜನೆ ಭೂತಾನ್‌ನ ಎರಡು ಪ್ರಮುಖ ನಗರಗಳಾದ ಗೆಲೆಫು ಮತ್ತು ಸಾಂತ್ಸೆಗಳಿಗೆ ಸಂಪರ್ಕ ಸಾಧ್ಯವಾಗಿಸುತ್ತದೆ. ಈ ಎರಡು ಯೋಜನೆಗಳು ಭಾರತೀಯ ರೈಲು ಜಾಲವಿರುವ ಕೊಕ್ರಾಜಾರ್ ಮತ್ತು ಬಾನರ್‌ಹಾಟ್‌ನಿಂದ ಆರಂಭವಾಗಲಿದ್ದು, ಸುಮಾರು ೯೦ ಕಿಲೋ ಮೀಟರ್ ಉದ್ದದ ರೈಲು ಮಾರ್ಗವನ್ನು ೪ ಸಾವಿರದ ೩೩ ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ, ಭೂತಾನ್‌ನೊಂದಿಗೆ ಭಾರತ ಕೈಗೊಳ್ಳುತ್ತಿರುವ ಮೊದಲ ರೈಲು ಯೋಜನೆ ಇದಾಗಿದೆ. ಕಳೆದ ವರ್ಷ ಪ್ರಧಾನಿ ನರೇಂದ್ರ ಮೋದಿ ಭೂತಾನ್ ಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಈ ಯೋಜನೆ ಕುರಿತಂತೆ ಪರಸ್ಪರ ಒಪ್ಪಂದಕ್ಕೆ ಸಹಿ ಮಾಡಲಾಗಿತ್ತು. ಭಾರತ, ಭೂತಾನ್‌ನ ಅಗ್ರ ವಾಣಿಜ್ಯ ಪಾಲುದಾರ ರಾಷ್ಟ್ರವಾಗಿದೆ ಎಂದು ತಿಳಿಸಿದರು.

***************

ಇಂದು ಮುಂಜಾನೆ, ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮತ್ತು ಬಿಹಾರ ಉಪಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರೊಂದಿಗೆ ಮೂರು ಅಮೃತ್ ಭಾರತ್ ಎಕ್ಸ್‌ಪ್ರೆಸ್ ರೈಲುಗಳು ಸೇರಿದಂತೆ ಏಳು ರೈಲುಗಳನ್ನು ಬಿಹಾರಕ್ಕೆ ಸಮರ್ಪಿಸಿದರು.

***************

ಆಂತರಿಕ ಮತ್ತು ಬಾಹ್ಯ ಭದ್ರತಾ ಸವಾಲುಗಳನ್ನು ಎದುರಿಸಲು ನೈಜ ಸಮಯದ ಸನ್ನದ್ಧತೆಯ ಅವಶ್ಯಕತೆಯಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ನವದೆಹಲಿಯಲ್ಲಿಂದು ನಡೆದ ಭಾರತೀಯ ಕರಾವಳಿ ಭದ್ರತಾ ಪಡೆ ಕಮಾಂಡರ್‌ಗಳ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದ ಅವರು, ರಕ್ಷಣಾ ಪಡೆಗಳು ಬಹುಮುಖ ಭದ್ರತಾ ಸವಾಲುಗಳನ್ನು ಎದುರಿಸಲು ಯಾವಾಗಲೂ ಸಜ್ಜಾಗಿರಬೇಕು

ಎಂದರು. ಇಂದಿನ ಸವಾಲುಗಳನ್ನು ಎದುರಿಸಲು, ಕೃತಕ ಬುದ್ಧಿಮತ್ತೆ, ಡ್ರೋನ್ ವ್ಯವಸ್ಥೆ ಮತ್ತು ಸ್ವಯಂಚಾಲಿತ ಪ್ರತಿಕ್ರಿಯಾ ವ್ಯವಸ್ಥೆಗಳ ಸಂಯೋಜಿತ ಅಳವಡಿಕೆಯನ್ನು ಅವರು ಒತ್ತಿ ಹೇಳಿದರು. ಕಡಲ ಭದ್ರತೆ ಪ್ರಮುಖ ಸವಾಲಾಗಿ ಉಳಿದಿದೆ ಎಂದ ಅವರು, ಭಾರತದ ಕರಾವಳಿ ಗಡಿ ವಿಸ್ತಾರವಾಗಿದ್ದು, ಅಪಾಯವೂ ಅದಕ್ಕೆ ಅನುಗುಣವಾಗಿ ಹೆಚ್ಚಿದೆ. ತಂತ್ರಜ್ಞಾನಗಳ, ವಿಶೇಷವಾಗಿ ಡ್ರೋನ್‌ಗಳು ಮತ್ತು ನಿಗಾವ್ಯವಸ್ಥೆಗಳ ಪ್ರಗತಿಯೊಂದಿಗೆ ಕಡಲ ಭದ್ರತೆಯನ್ನು ಮತ್ತಷ್ಟು ಬಲಪಡಿಸಲಾಗಿದೆ ಎಂದರು.

***************

ನವದೆಹಲಿಯ ದೀನ್ ದಯಾಳ್ ಉಪಾಧ್ಯಾಯ ಮಾರ್ಗದಲ್ಲಿರುವ ನೂತನ ದೆಹಲಿ ಬಿಜೆಪಿ ಕಾರ್ಯಾಲಯವನ್ನು ಇಂದು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ, ಇದೊಂದು ಹೊಸ ಕನಸುಗಳು ಮತ್ತು ಸಂಕಲ್ಪಗಳ ಕ್ಷಣವಾಗಿದೆ ಎಂದ ಪ್ರಧಾನಿ, ಸಮಸ್ತ ಬಿಜೆಪಿ ಕಾರ್ಯಕರ್ತರಿಗೆ ಅಭಿನಂದನೆ ತಿಳಿಸಿದರು.

***************

ರಾಷ್ಟ್ರಪತಿ ಭವನದಲ್ಲಿ ಇಂದು ಭಾರತೀಯ ಅಂಕಿ ಅಂಶ ಸೇವೆ ಐಎಸ್‌ಎಸ್ , ಭಾರತೀಯ ಕೌಶಲ್ಯಾಭಿವೃದ್ಧಿ ಸೇವೆ - ಐಎಸ್‌ಡಿಎಸ್ ಮತ್ತು ಕೇಂದ್ರ ಇಂಜಿನಿಯರಿಂಗ್ ಸೇವೆ ಸಿಇಎಸ್‌ಗೆ ಸೇರಿದ ಪ್ರಶಿಕ್ಷಣಾರ್ಥಿ ಅಧಿಕಾರಿಗಳು ಇಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿದರು. ಅಧಿಕಾರಿಗಳನುದ್ದೇಶಿಸಿ ಮಾತನಾಡಿದ ರಾಷ್ಟ್ರಪತಿ, ಇಂದಿನ ದಂತ್ತಾಂಶ ಆಧಾರಿತ ಜಗತ್ತಿನಲ್ಲಿ ಅಂಕಿ ಅಂಶಗಳ ಮಹತ್ವ ಗಮನಾರ್ಹವಾಗಿ ಹೆಚ್ಚಿದೆ ಎಂದರು. ಕೌಶಲ್ಯ ಮತ್ತು ಜ್ಞಾನವೇ ಒಂದು ರಾಷ್ಟ್ರದ ಬೆಳವಣಿಗೆಯ ಚಾಲಕ ಶಕ್ತಿಯಾಗಿವೆ. ಇಂಜಿನಿಯರ್ ಗಳು ರಾಷ್ಟ್ರದ ತಾಂತ್ರಿಕ ಪ್ರಗತಿಯಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ ಎಂಬ ಪ್ರೋತ್ಸಾಹಕ ನುಡಿಗಳ ಮೂಲಕ ರಾಷ್ಟ್ರಪತಿ ಅಧಿಕಾರಿಗಳನ್ನು ಹುರಿದುಂಬಿಸಿದರು. .

***************

ಕಳೆದ ಶನಿವಾರ ಟಿವಿಕೆ ಪಕ್ಷದ ಸಾರ್ವಜನಿಕ ರ್‍ಯಾಲಿಯ ವೇಳೆ, ೪೧ ಜನರ ಸಾವಿಗೆ ಕಾರಣವಾದ ಕಾಲ್ತುಳಿತ ದುರಂತ ಸಂಭವಿಸಿದ ತಮಿಳುನಾಡಿನ ಕರೂರ್‌ಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಇಂದು ಭೇಟಿ ನೀಡಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಧಾನಮಂತ್ರಿ ಅವರು ತಮ್ಮನ್ನು ಮತ್ತು ಕೇಂದ್ರ ಸಚಿವ ಡಾ. ಎಲ್. ಮುರುಗನ್ ಅವರನ್ನು ಕರೂರ್‌ಗೆ ತೆರಳಿ ಘಟನೆಯ ವಿವರಗಳನ್ನು ತಿಳಿದುಕೊಳ್ಳಲು ಸೂಚಿಸಿದ್ದಾರೆ ಎಂದರು. ಇದಕ್ಕೂ ಮುನ್ನ ಸಚಿವರು ಘಟನೆ ನಡೆದ ಸ್ಥಳ, ಸಂತ್ರಸ್ತರ ಮನೆಗಳು ಮತ್ತು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರನ್ನು ಭೇಟಿ ಮಾಡಿ, ಪರಿಸ್ಥಿತಿ ವಿಚಾರಿಸಿದರು.

***************

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜಗತ್ ಪ್ರಕಾಶ್ ನಡ್ಡಾ, ತಮಿಳುನಾಡಿನ ಕರೂರ್‌ನಲ್ಲಿ ಸಂಭವಿಸಿದ ಕಾಲ್ತುಳಿತ ದುರಂತದ ಪರಿಶೀಲನೆಗಾಗಿ ಎನ್‌ಡಿಎ ನಿಯೋಗವೊಂದನ್ನು ರಚಿಸಿದ್ದಾರೆ. ಈ ನಿಯೋಗ, ಘಟನೆಗೆ ಕಾರಣವಾದ ಪರಿಸ್ಥಿತಿಗಳನ್ನು ಪರಾಮರ್ಶಿಸಿ, ಸಂತ್ರಸ್ತ ಕುಟುಂಬಗಳನ್ನು ಭೇಟಿ ಮಾಡಿ, ನಂತರ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಿಗೆ ವರದಿ ಸಲ್ಲಿಸಲಿದೆ ಬಿಜೆಪಿ ಸಂಸದೆ ಹೇಮಾ ಮಾಲಿನಿ ಅವರನ್ನು ನಿಯೋಗದ ಸಂಯೋಜಕರಾಗಿ ನೇಮಕ ಮಾಡಲಾಗಿದೆ. ಬಿಜೆಪಿ ಸಂಸದರಾದ ಅನುರಾಗ್ ಠಾಕುರ್, ತೇಜಸ್ವಿ ಸೂರ್ಯ, ಅಪ್ರಾಜಿತಾ ಸಾರಂಗಿ, ರೇಖಾ ಶರ್ಮಾ, ಬ್ರಿಜ್ ಲಾಲ್, ಶಿವಸೇನೆ ಸಂಸದ ಶ್ರೀಕಾಂತ್ ಶಿಂಧೆ ಮತ್ತು ಟಿಡಿಪಿ ಸಂಸದ ಪುಟ್ಟ ಮಹೇಶ್ ಕುಮಾರ್ ನಿಯೋಗದ ಸದಸ್ಯರಾಗಿದ್ದಾರೆ.

***************

ಐಸ್‌ಲ್ಯಾಂಡ್, ಲಿಚೆನ್‌ಸ್ಟೈನ್, ನಾರ್ವೆ ಮತ್ತು ಸ್ವಿಟ್ಜರ್‌ಲ್ಯಾಂಡ್ ಒಳಗೊಂಡ ಐರೋಪ್ಯ ಮುಕ್ತ ವ್ಯಾಪಾರ ಒಕ್ಕೂಟ - ಇಎಫ್‌ಟಿಎ ದೇಶಗಳೊಂದಿಗೆ ಮುಕ್ತ ವ್ಯಾಪಾರ ಒಪ್ಪಂದ ಅಕ್ಟೋಬರ್ ೧ರಿಂದ ಜಾರಿಗೆ ಬರಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ತಿಳಿಸಿದ್ದಾರೆ. ಗ್ರೇಟರ್ ನೊಯ್ಡಾದಲ್ಲಿಂದು ನಡೆದ ಉತ್ತರಪ್ರದೇಶ ಅಂತಾರಾಷ್ಟ್ರೀಯ ವ್ಯಾಪಾರ ಪ್ರದರ್ಶನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಯುಎಇ, ಆಸ್ಟ್ರೇಲಿಯಾ ಮತ್ತು ಬ್ರಿಟನ್ ಜೊತೆ

ಈಗಾಗಲೇ ಮುಕ್ತ ವ್ಯಾಪಾರ ಒಪ್ಪಂದಗಳನ್ನು ಅಂತಿಮಗೊಳಿಸಿರುವ ಭಾರತದೊಂದಿಗೆ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಒಪ್ಪಂದ ಮಾಡಿಕೊಳ್ಳಲು ಆಸಕ್ತಿ ತೋರುತ್ತಿವೆ ಎಂದು ಅವರು ಹೇಳಿದರು. ಭಾರತ, ಅಮೆರಿಕಾ, ಐರೋಪ್ಯ ಒಕ್ಕೂಟ, ನ್ಯೂಜಿಲ್ಯಾಂಡ್, ಓಮಾನ್, ಪೆರು, ಚಿಲಿ ಜೊತೆ ಚರ್ಚೆ ನಡೆಸುತ್ತಿದೆ. ಕತಾರ್ ಮತ್ತು ಬಹ್ರೇನ್ ಕೂಡಾ ಆಸಕ್ತಿ ವ್ಯಕ್ತಪಡಿಸಿದ್ದಾರೆ ಎಂದು ಅವರು ತಿಳಿಸಿದರು.

***************

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಘೋಷಿಸಿರುವ ಜಿಎಸ್‌ಟಿ ಉಳಿತಾಯ ಉತ್ಸವ, ಈ ತಿಂಗಳ ೨೨ ರಿಂದ ಆರಂಭಗೊಂಡಿದ್ದು, ಸಮಾಜದ ಎಲ್ಲಾ ವರ್ಗಗಳಿಗೆ ಲಾಭ ನೀಡುತ್ತಿದೆ. ಮುಂದಿನ ತಲೆಮಾರಿನ ಜಿಎಸ್‌ಟಿ ಸುಧಾರಣೆಗಳು ಭಾರತದ ಪರೋಕ್ಷ ತೆರಿಗೆ ವ್ಯವಸ್ಥೆಯ ಸರಳೀಕರಣದ ಹಾದಿಯಲ್ಲಿ ಮಹತ್ವಪೂರ್ಣ ಹೆಜ್ಜೆಯಾಗಿವೆ. ಈ ಸುಧಾರಣೆಗಳಿಂದಾಗಿ ಆರೋಗ್ಯ ಕ್ಷೇತ್ರದಲ್ಲಿ ತೆರಿಗೆ ದರ ಕಡಿತಗೊಂಡು ನಾಗರಿಕರಿಗೆ ಅನುಕೂಲವಾಗಿದೆ.

ಸಾಮಾನ್ಯ ಜನರ ಆರ್ಥಿಕ ಹೊರೆ ತಗ್ಗಿಸುವ ನಿಟ್ಟಿನಲ್ಲಿ ಸರ್ಕಾರ ಆರೋಗ್ಯ ಕ್ಷೇತ್ರದಲ್ಲಿ ಗಮನಾರ್ಹ ತೆರಿಗೆ ಕಡಿತಗಳನ್ನು ಮಾಡಿದೆ. ಜಿಎಸ್‌ಟಿ ೨.೦ ಅಡಿಯಲ್ಲಿ ಕ್ಯಾನ್ಸರ್ ಹಾಗೂ ಗಂಭೀರ ದೀರ್ಘಕಾಲಿಕ ಕಾಯಿಲೆಗಳ ಚಿಕಿತ್ಸೆಗೆ ಬಳಸುವ ೩೬ ಜೀವರಕ್ಷಕ ಔಷಧಿಗಳ ಮೇಲೆ ಜಿಎಸ್‌ಟಿ ಸಂಪೂರ್ಣವಾಗಿ ರದ್ದುಗೊಳಿಸಲಾಗಿದೆ. ಅಗತ್ಯ ಔಷಧಗಳು, ರೋಗನಿರ್ಣಯ ಕಿಟ್, ಗ್ಲೂಕೋಮೀಟರ್, ಥರ್ಮೋಮೀಟರ್ ಮುಂತಾದ ವೈದ್ಯಕೀಯ ಉಪಕರಣಗಳ ಮೇಲೆ ಜಿಎಸ್‌ಟಿ ದರವನ್ನು ಶೇಕಡಾ ೧೨ ರಿಂದ ಶೇಕಡಾ ೫ ಕ್ಕೆ ಇಳಿಸಲಾಗಿದೆ. ಜೊತೆಗೆ, ಶೇಕಡಾ ೧೮ ತೆರಿಗೆ ವಿಧಿಸಲಾಗುತ್ತಿದ್ದ ಆರೋಗ್ಯ ಮತ್ತು ಜೀವ ವಿಮೆ ಪ್ರೀಮಿಯಂ ಈಗ ಸಂಪೂರ್ಣವಾಗಿ ತೆರಿಗೆ ಮುಕ್ತವಾಗಿದೆ. ಇದರಿಂದ ವಿಮಾ ಪ್ರೀಮಿಯಂ ದರ ಕಡಿಮೆಯಾಗಲಿದ್ದು, ಹೆಚ್ಚಿನ ಕುಟುಂಬಗಳು ವಿಮೆ ಪಡೆಯಲು ನೆರವಾಗಲಿದೆ. ಆರೋಗ್ಯ ಕ್ಷೇತ್ರದಲ್ಲಿ ಜಿಎಸ್ಟಿ ಸರಳೀಕರಣ, ಚಿಕಿತ್ಸಾ ಖರ್ಚುಗಳನ್ನು ಕಡಿಮೆ ಮಾಡಿದೆ ಮತ್ತು ಇದು ವಿಶೇಷವಾಗಿ ಮಧ್ಯಮವರ್ಗ ಹಾಗೂ ಕೆಳ ಮಧ್ಯಮವರ್ಗದವರಿಗೆ ಅನುಕೂಲವಾಗಲಿದೆ.

***************

ಇಂದು ವಿಶ್ವ ಹೃದಯ ದಿನ.

ಹೃದಯ ಸಂಬಂಧಿ ರೋಗಗಳು, ಅವುಗಳನ್ನು ತಡೆಗಟ್ಟುವ ಮಾರ್ಗಗಳು ಮತ್ತು ಅವುಗಳ ಜಾಗತಿಕ ಪ್ರಭಾವದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಪ್ರತಿವರ್ಷ ಸೆಪ್ಟೆಂಬರ್ ೨೯ ಅನ್ನು ವಿಶ್ವ ಹೃದಯ ದಿನವನ್ನಾಗಿ ಆಚರಿಸಲಾಗುತ್ತದೆ. ಇದರ ಅಂಗವಾಗಿ ದೇಶಾದ್ಯಂತ ವಿವಿಧ ಸಂಘ ಸಂಸ್ಥೆಗಳ ವತಿಯಿಂದ ಕಾರ್ಯಕ್ರಮಗಳು, ಶಿಬಿರಗಳು, ಜಾಗೃತಿ ಜಾಥಾಗಳನ್ನು ಆಯೋಜಿಸಲಾಗಿತ್ತು.

***************

ನವದೆಹಲಿಯಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಕಿರಿಯರ ಶೂಟಿಂಗ್ ವಿಶ್ವಕಪ್‌ನ ಮಹಿಳಾ ೧೦ ಮೀಟರ್ ಏರ್ ರೈಫಲ್ ಸ್ಪರ್ಧೆಯಲ್ಲಿ ಭಾರತಕ್ಕೆ ಮೂರೂ ಪದಕಗಳು ಲಭಿಸಿವೆ. ೨೫೨.೭ ಅಂಕಗಳೊಂದಿಗೆ ಭಾರತದ ಓಜಸ್ವಿ ಠಾಕೂರ್ ಚಿನ್ನಗೆದ್ದರೆ, ೨೫೦.೨ ಅಂಕಗಳೊಂದಿಗೆ ಹೃದ್ಯಶ್ರೀ ಕೊಂದೂರ್ ಬೆಳ್ಳಿ ಹಾಗೂ ೨೨೯.೪ ಅಂಕಗಳೊಂದಿಗೆ ಎಸ್. ಕ್ಷೀರ್ ಸಾಗರ್ ಬೆಳ್ಳಿ ಪದಕಗಳಿಸಿದ್ದಾರೆ. ಪುರುಷರ ೧೦ ಮೀಟರ್ ರೈಫಲ್ ಸ್ಪರ್ಧೆಯಲ್ಲಿ ಬಾರತದ ಹಿಮಾಂಶು ೨೫೦.೯ ಅಂಕಗಳೊಂದಿಗೆ ಚಿನ್ನದ ಪದಕ ತಮ್ಮದಾಗಿಸಿಕೊಂಡರೇ, ಭಾರತದವರೇ ಆದ ಅಭಿನವ್ ಷಾ, ಕಂಚಿನ ಪದಕಕ್ಕೆ ಕೊರಳೊಡ್ಡಿದರು.

***************